ಆಗೋದಿರಲಿ, ಪೊಲೀಸ್ ಕಂಪ್ಲೆಂಟ್ ಕೊಟ್ಟು ಬಿಡ್ತಾರೆ ಅಷ್ಟೇ...' ಫ್ರೂಟ್ ಸಲಾಡ್ ಬಟ್ಟಲನ್ನು ಕೈಗೆತ್ತಿಕೊಂಡ ವಿವೇಕ್.

'ಅವಳು ದಡ್ಡಿ... ಅವನನ್ನೇ ಮದುವೆ ಮಾಡಿಕೊಂಡಳು. ಅವಳ ಫೋಟೊನೂ ಇರಬೇಕು. ವಿವೇಕ್... ಈ ತಟ್ಟೆಗಳನ್ನು ತೆಗೆದು ಬಿಡು... ಆಲ್ಬಂ ಇಡಬೇಕು.'

ವಿವೇಕ್ ತಟ್ಟೆ ತೆಗೆದು, ನನ್ನತ್ತ ನೋಡಿದ.

'ನೋಡಿದ್ಯಾ ನಿನ್ನ ಸೊಸೆ! ನನ್ನ ಹತ್ತಿರ ಎಷ್ಟು ಕೆಲಸ ಮಾಡಿಸುತ್ತಾಳೆ...' ನಕ್ಕು, ಒಳ ನಡೆದೆ.

'ಅತ್ತೇ... ಎಲ್ಲಿ ಹೋಗ್ತಿದೀರಿ?... ಬನ್ನಿ...'

'ನೀನು ಅವರಿದಾರಾ ನೋಡು. ನಾನು ಅಡಿಗೆಮನೆ ಕಟ್ಟೆ ಒರೆಸಿ ಬಂದುಬಿಡ್ತೀನಿ...'

'ನಾನು ಅಡಿಗೆ ಮನೆ ಕ್ಲೀನ್ ಮಾಡ್ಲಾಮ್ಮಾ? ನಂಗೆ ಅಭ್ಯಾಸ ಇದೆ...' ವಿವೇಕ್ ಹೇಳಿದಾಗ ಸೌಮ್ಯ ಕಣ್ಣರಳಿಸಿದಳು.

'ಇದು ಅತಿ ಆಯ್ತು ವಿವೇಕ್! ಅತ್ತೆ, ನಿನ್ನ ಸೋಮಾರಿ ಅಂದ್ರು ಅಂತ ಡಿಫೆಂಡ್ ಮಾಡಿಕೊಂಡರೆ... ನೀನೇ ಎಲ್ಲಾ ಮಾಡೋದು ಅನ್ನೋ ತರಹ ಪೋಸ್ ಕೊಡಬೇಡ. ಸ್ವಲ್ಪ ಹೆಲ್ಪ್ ಮಾಡ್ತಾನೆ ಅಷ್ಟೇ ಅತ್ತೇ... ಅತ್ತೆ... ಇಲ್ಲಿ ಬನ್ನಿ.. ಇವರೇ ಅಲ್ಲಿ ಇದ್ದದ್ದು... ಅವರ ಬಗ್ಗೆಯೇ ಯೋಚಿಸ್ತಾ ಇದ್ದೆನಲ್ಲಾ... ತೆರೆದ ಮೊದಲ ಪುಟದಲ್ಲೇ ಇದ್ದಾರೆ. ನೀವು ಹೂ ವೀಳ್ಯಕ್ಕೆ ಅವರ ಕಾಲು ತೊಳಿತಾ ಇದೀರಿ...' ನಾನು ವಿವೇಕ್ ಇಬ್ಬರೂ ಅವಳ ಹಿಂದೆ ನಿಂತು, ಅವಳು ಬೊಟ್ಟು ಮಾಡಿದ ಫೋಟೊದತ್ತ ನೋಡಿದ್ವಿ...

'ಇವ್ರು ನನ್ನ ಅತ್ತೆ! ನನ್ನ ದೊಡ್ಡ ಸೋದರ ಮಾವನ ಹೆಂಡತಿ ರತ್ನಾತ್ತೆ... ಅವರ್ಯಾಕೆ ವೃದ್ಧಾಶ್ರಮದಲ್ಲಿ ಇರ್ತಾರೆ? ಅಮೆರಿಕದಲ್ಲಿರುವ ಮಗಳ ಮನೆಯಲ್ಲಿ ಇದ್ದಾರೆ. ಮಗಾನೂ ಅಲ್ಲೇ ಇದ್ದಾನೆ. ಅಲ್ಲಿಗೆ ಬೇಕಾದರೂ ಹೋಗಿ ಬರಬಹುದು...'

ಸೌಮ್ಯಳ ಬೆರಳು ರತ್ನತ್ತೆಯ ಮುಖದ ಮೇಲಿಂದ ಕದಲಲಿಲ್ಲ.

'ಇಲ್ಲ... ಇವರನ್ನೇ ನಾನು ನೋಡಿದ್ದು. ಇಲ್ಲಿ ಈ ಫೋಟೊದಲ್ಲಿ ಮುತ್ತೈದೆಯಾಗಿದ್ದಾರೆ. ಈಗ ಇಷ್ಟು ಒಡವೆಗಳಿಲ್ಲ. ಹಣೆಗೆ ಕರೀ ಬೊಟ್ಟು, ಅಮೆರಿಕೆಗೆ ಯಾವಾಗ ಹೋದರು ಇವರು?...' ಅವಳ ದನಿಯಲ್ಲಿನ ದೃಢತೆಗೆ ಬೆರಗಾದೆ.

'ವರ್ಷದ ಮೇಲಾಯ್ತು ಕಣೇ... ಮಾವ ಹೋದ ಆರು ತಿಂಗಳಿಗೆ ರತ್ನತ್ತೆಯ ಮಗಳು ಸುನೀತಾ ಬಂದು ಕರೆದುಕೊಂಡು ಹೋದಳು.'

'ಓ...'

'ನಿನ್ನ ಮದುವೆ ಹೊತ್ತಿಗೆ ಚೆನ್ನಾಗೇ ಇದ್ದ ಮಾವ ತಟ್ಟನೆ ಹೋಗಿಬಿಟ್ರು. ರಾತ್ರಿ ಮಲಗಿದ್ದವರು ಬೆಳಗ್ಗೆ ಏಳಲಿಲ್ಲ. ಆ ಶಾಕ್‌ನಿಂದ ಬಿ.ಪಿ. ತರಿಸಿಕೊಂಡ್ರು ರತ್ನತ್ತೆ. ಮಾವ ಹೋದಾಗ ಅವರ ಮಗ ರಾಘು ಬಂದಿದ್ದ. ಅವನ ಜೊತೆ ಹೋಗಲಿಲ್ಲ. ಒಬ್ಬರೇ ಇರ್ತೀನಿ ಅಂತ ಹಟ ಮಾಡಿ ಉಳ್ಕೊಂಡ್ರು. ಆದ್ರೆ ಒಬ್ಬರೇ ಇರಲು ಆಗಲಿಲ್ಲ. ಗಾಂಧಿಬಜಾರ್ ಬಳಿ ದೊಡ್ಡ ಬಂಗಲೆ ಅವರದು. ಯಾರನ್ನೂ ನಂಬುವುದಿಲ್ಲ ಬೇರೆ. ಮಾವ ಇದ್ದಾಗ ಅವರೇ ಎಲ್ಲಾ ಮ್ಯಾನೇಜ್ ಮಾಡ್ತಾ ಇದ್ರು. ಅತ್ತೆ ಬರೀ ಜೋರು ಮಾಡಿಕೊಂಡು ಓಡಾಡಿಕೊಂಡು ಇರ್ತಿದ್ರು. ಅತ್ತೆ ಒಂಟಿಯಾಗಿ ಆರು ತಿಂಗಳು ಇರೋ ಹೊತ್ತಿಗೆ ಎಲ್ಲರಿಗೂ ಸಾಕು ಸಾಕು ಮಾಡಿಬಿಟ್ರು. ಸುನೀತಾ ಬಂದು ಕರೆದುಕೊಂಡು ಹೋದಳು...' ಉದ್ದಕ್ಕೆ ಹೇಳಿದೆ.

'ಸುನೀತಾ ಅವರಿಗೆ ಫೋನ್ ಮಾಡಿ ಅತ್ತೆ...'